



## ಬರವಣಿಗೆಯಲ್ಲೂ ಕೃಷಿ

ಕೃಷಿ ಒಂದೇ ಅಲ್ಲ, ಸತ್ಯನಾರಾಯಣರ ಬೌದ್ಧಿಕ ಕುಶಲತೆ ಕೌಶಲ್ಯ ಬೇರೆ ಬೇರೆ ಬಗೆಗಳಲ್ಲೂ ಹರಳುಕಟ್ಟಿವೆ. ಬಡತನದಿಂದ ಹೆಚ್ಚು ಬದಲಾಗದಿದ್ದರೂ ಅವರೊಬ್ಬ ಉತ್ತಮ ಕವಿ, ಲೇಖಕ, ವ್ಯಂಗ್ಯಚಿತ್ರಕಾರ. ಅತ್ಯುತ್ತಮ ಓದುಗ. ಕಳೆದ ವರ್ಷ ಕೇರಳದ ಸಾಕ್ಷರತಾ ಮಿಶನ್ ಮೂಲಕ ಪಿ.ಯು.ಸಿ. ಮುಗಿಸಿದ್ದಾರೆ. ಗ್ರಾಮೀಣಾಭಿವೃದ್ಧಿ ಯೋಜನೆಯ ಮೂಲಕ ಮೋಟರ್ ರಿಪೇರಿ, ವೈರಿಂಗ್ ಕಲಿತು ಜೀವನದಾರಿಯನ್ನಾಗಿಸಿಕೊಂಡಿದ್ದಾರೆ. ಜೇನುಕೃಷಿ, ಮುಜಂಟಿ ಜೇನುಕೃಷಿ, ಮರದ ಫರ್ನಿಚರ್ ಕೆಲಸ, ಕಸಿ ಕಟ್ಟುವುದು ಇವರ ಇನ್ನಿತರ ಮೆಚ್ಚಿನ ಹವ್ಯಾಸ, ಪ್ರವೃತ್ತಿ.



ಮೇಲೆ ಹೆಸರು ಬರೆದಿಟ್ಟರೆ ಮುಗಿಯಿತಲ್ಲ? ಅದನ್ನು ಮತ್ತೆ ಮತ್ತೆ ನೆಲಕ್ಕಿಡುವ, ಬಿತ್ತಿ ಬೆಳೆಸುವ ಹಂಗೇಕೆ? ಇದು ಸಾಮಾನ್ಯ ಪ್ರಶ್ನೆ.

### ತಳಿ ರಕ್ಷಣೆಯ ಸವಾಲು

ಎಲ್ಲಾ ಬೀಜಗಳಂತೆ ಭತ್ತದ್ದೂ ಅದೇ ಸಮಸ್ಯೆ. ಆರು, ತಪ್ಪಿದರೆ ಎಂಟು ತಿಂಗಳು ಬೀಜಗಳನ್ನು ಹಾಗೆಯೇ ಇಟ್ಟರೆ ಮತ್ತೆ ಮೊಳಕೆ ಬರಲಾರದು. ಅದು ಫಲವಂತಿಕೆಯ ಶಕ್ತಿಯನ್ನು ಕಳೆದುಕೊಳ್ಳುತ್ತದೆ. ಪುನರಪಿ ಬೆಳೆಸಿಯೇ ಬೀಜಗಳನ್ನು ಕಾಯ್ದುಕೊಳ್ಳಬೇಕು. ಈ ಕಾರಣಕ್ಕಾಗಿಯೇ ತಳಿ ಉಳಿಸುವ ಪ್ರಯತ್ನವಾದಿಗಳ ಬಗ್ಗೆ ಕೃಷಿಲೋಕದಲ್ಲೊಂದು ಸಹಜ ಬೆರಗು ಇದ್ದೇ ಇದೆ. ಇದು ಹತ್ತಲ್ಲ ಇಪ್ಪತ್ತಲ್ಲ, ಆರುನೂರಕ್ಕಿಂತಲೂ ಹೆಚ್ಚು ತಳಿ ಸತ್ಯನಾರಾಯಣರಲ್ಲಿ ಇದೆ ಎಂಬುದು ಇಡೀ ದೇಶವೇ ಬೆರಗುಗೊಳ್ಳುವ ಸಂದರ್ಭ!

ಕೆಲವು ಸ್ಯಾಂಪಲ್ ಗಮನಿಸಿ. ಇವರಲ್ಲಿ ಬುದ್ಧನ ಕಾಲದ ಕಲಾನಾಮಕ್ಕ್, ಶುಶ್ರುತನ ಕಾಲದ ಕಳಮೆ, ಮೂರು ಬೆಳೆಗೂ ಸಲ್ಲುವ ಕೊಳಕೆ ದೊಡ್ಡ, ಅರುವತ್ತು ದಿನಗಳ ಬೆಳೆ ಷಷ್ಠಿಕಾ, ಕುಂಕುಮಮಶಾ, ಪುರಿಗಡಲೆ–ಅವಲಕ್ಕಿಗೆ

